ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ

ಸಿಸಿಃ **37/2019**

ಸಿ.ಡಬ್ಲ್ಯೂಃ **14** ಪಿಡಬ್ಲ್ಯೂಃ **4**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಆನಂದ ಯು. |
| ತಂದೆಯ ಹೆಸರು | ಃ | ಗೋಪಾಲ ಶೇರೇಗಾರ |
| ವಯಸ್ಸು | ಃ | **66** ವರ್ಷ |
| ಉದ್ಯೋಗ | ಃ | ನಿವೃತ್ತ ಪಿ.ಎಸ್.ಐ. |
| ವಾಸಸ್ಥಳ | ಃ | ಉಪ್ಪೂರು, ಉಡುಪಿ. |

ಸಾಕ್ಷಿಯ ಸಾಕ್ಷ್ಯವನ್ನು ದ.ಪ್ರ.ಸಂ. **299** ರಡಿಯಲ್ಲಿ ದಾಖಲಿಸಿಕೊಳ್ಳಲಾಗಿದೆ.

ದಿಃ **13.01.2023** ರಂದು ಸಾಕ್ಷಿಗೆ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸರಕಾರಿ ಅಭಿಯೋಜಕರಿಂದಃ

ನಾನು ಮಣಿಪಾಲ ಪೋಲೀಸ್ ಠಾಣೆಯಲ್ಲಿ ದಿನಾಂಕ **25.05.2011** ರಿಂದ ದಿನಾಂಕವಿ **31.07.2016** ರವರೆಗೆ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣಕೆಕ ಸಂಬಂಧಪಟ್ಟಂತೆ ದಿನಾಂಕ **25.04.2016** ರಂದು ಮಣಿಪಾಲ ಪೋಲೀಸ್ ಠಾಣಾ ಅ.ಕ್ರ.ನಂಬ್ರ **130/2016** ಐಪಿಸಿ ಕಲಂ **457,380** ಪ್ರಕರಣದಲ್ಲಿ ಪಿ.ಎಸ್.ಐ. ರವರ ಆದೇಶದಂತೆ ತಕ್ಷೀರು ಸ್ಥಳವಾದ ಶಿವಳ್ಳಿ ಗ್ರಾಮದ ಲಕ್ಷೀಂದ್ರ ನಗರ ಎಂಬಲ್ಲಿ ನಕ್ಷತ್ರ ಕಾಂಪ್ಲೆಕ್ಸ್ ಕಟ್ಟಡದ ಕೆಳ ಅಂತಸ್ತಿನಲ್ಲಿರುವ ರಿಲೆಯನ್ಸ್ ರಿಟೇಲ್ ಲೇಡಿಸ್ ಪ್ಯಾಷನ್ ಎಂಬ ಷೋ ರೂಂನಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇನೆ. ಮಹಜರ್ ನ್ನು ಪಂಚರ ಸಮಕ್ಷಮ **14.15** ರಿಂದ **15.00** ಘಂಟೆಯ ತನಕ ತಯಾರಿಸಿರುತ್ತೇನೆ.

ಒಂದು ಮಹಜರ್ ನಲ್ಲಿ ಸ್ಟೀಲ್ ಡಬ್ಬವನ್ನು ಸ್ವಾಧೀನಪಡಿಸಿಕೊಂಡು ಪಿ.ಎಫ್. ನಂಬ್ರ **73/2016** ರಂತೆ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿದಾರರಾದ ಅಭಿಷೇಕ್ ಮತ್ತು ಕುಮಾರಿ ಚೈತ್ರ ಎಂಬುವವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಪಿ.ಎಸ್.ಐ.ರವರಿಗೆ ವಹಿಸಿಕೊಟ್ಟಿರುತ್ತೇನೆ. ನಾನು ಜರುಗಿಸಿದ ಮಹಜರ್ ನ ಟ್ರೂ ಕಾಪಿಯನ್ನು ನೋಡುತ್ತಿದ್ದು ನಿಪಿ.**12** ಎಂದು ಗುರ್ತಿಸಲಾಯಿತು.

ದ.ಪ್ರ.ಸಂ.**299** ರಡಿಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಂಡಿರುವುದರಿಂದ ಪಾಟೀ ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂದು ಒಪ್ಪಿದರು

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಸಿ.ಜೆ.ಎಮ್, ಉಡುಪಿ